# GENERAL KANNADA PAPER II
# SECOND DIVISION ASSISTANT

**Examination held on 16-06-2019** **Total marks: 100**

**(2:00PM TO 3:30PM)** **Subject Code: 370** **One mark for each question**

## KEY CHART

**Question Booklet Series - 'A'**

| Question Number | Key Answer | Question Number | Key Answer | Question Number | Key Answer | Question Number | Key Answer |
|---|---|---|---|---|---|---|---|
| 1 | 2 | 26 | 3 | 51 | 1 | 76 | 3 |
| 2 | 4 | 27 | 3 | 52 | 1 | 77 | 4 |
| 3 | 4 | 28 | 4 | 53 | 3 | 78 | 2 |
| 4 | 3 | 29 | 1 | 54 | 2 | 79 | 2 |
| 5 | 1 | 30 | 2 | 55 | 4 | 80 | 4 |
| 6 | 3 | 31 | 4 | 56 | 2 | 81 | 3 |
| 7 | 4 | 32 | 2 | 57 | 3 | 82 | 4 |
| 8 | 1 | 33 | 3 | 58 | 1 | 83 | 3 |
| 9 | 2 | 34 | 2 | 59 | 2 | 84 | 1 |
| 10 | 4 | 35 | 1 | 60 | 1 | 85 | 2 |
| 11 | 4 | 36 | 4 | 61 | 1 | 86 | 4 |
| 12 | 4 | 37 | 1 | 62 | 2 | 87 | 3 |
| 13 | 4 | 38 | 2 | 63 | 2 | 88 | 3 |
| 14 | 3 | 39 | 4 | 64 | 2 | 89 | 2 |
| 15 | 4 | 40 | 4 | 65 | 3 | 90 | 2 |
| 16 | 4 | 41 | 2 | 66 | 1 | 91 | 2 |
| 17 | 4 | 42 | 3 | 67 | 4 | 92 | 3 |
| 18 | 2 | 43 | 2 | 68 | 2 | 93 | 4 |
| 19 | 1 | 44 | 3 | 69 | 1 | 94 | 1 |
| 20 | 3 | 45 | 4 | 70 | 3 | 95 | 3 |
| 21 | 4 | 46 | 2 | 71 | 2 | 96 | 3 |
| 22 | 1 | 47 | 2 | 72 | 4 | 97 | 4 |
| 23 | 3 | 48 | 4 | 73 | 3 | 98 | 4 |
| 24 | 3 | 49 | 2 | 74 | 2 | 99 | 2 |
| 25 | 2 | 50 | 3 | 75 | 1 | 100 | 3 |

www.shikarat.com

2632193

ಈ ಪ್ರಶ್ನೆ ಪುಸ್ತಿಕೆಯಲ್ಲಿ ಸಾಮಾನ್ಯ ಕನ್ನಡ (ವಿಷಯ ಸಂಕೇತ : **370**) ಹಾಗೂ ಸಾಮಾನ್ಯ ಇಂಗ್ಲೀಷ್ (ವಿಷಯ ಸಂಕೇತ : **371**) ಎಂಬ ಎರಡು ವಿಷಯದ ಪ್ರಶ್ನೆ ಪತ್ರಿಕೆಗಳಿವೆ. ಅಭ್ಯರ್ಥಿಗಳು ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್ ಇವುಗಳಲ್ಲಿ ಯಾವುದಾದರೂ ಒಂದನ್ನು ಮಾತ್ರ ಆರಿಸಿ ಮತ್ತು ಉತ್ತರಿಸಬೇಕು. ಅಭ್ಯರ್ಥಿಯು ತಾನು ಆಯ್ಕೆ ಮಾಡಿಕೊಂಡು ಉತ್ತರಿಸುವ ವಿಷಯದ ಮುಂದಿನ ವೃತ್ತವನ್ನು ಸ್ಪಷ್ಟವಾಗಿ ಓ.ಎಂ.ಆರ್. ಉತ್ತರ ಹಾಳೆಯಲ್ಲಿರುವ ನಿಗದಿತ ಸ್ಥಳದಲ್ಲಿ ಎನ್‌ಕೋಡ್ ಮಾಡತಕ್ಕದ್ದು. **ವಿಷಯ ಸಂಕೇತವನ್ನು ಎನ್‌ಕೋಡ್ ಮಾಡದಿದ್ದಲ್ಲಿ OMR ಉತ್ತರ ಹಾಳೆಯನ್ನು ತಿರಸ್ಕರಿಸಲಾಗುವುದು.**

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

**2019**

**ಪ್ರಶ್ನೆ ಪತ್ರಿಕೆ ಶ್ರೇಣಿ**

**A**

# ಪ್ರಶ್ನೆ ಪುಸ್ತಿಕೆ

# ಸಾಮಾನ್ಯ ಕನ್ನಡ (ಪತ್ರಿಕೆ II)

**ಸಮಯ : $1\frac{1}{2}$ ಗಂಟೆಗಳು** | **ವಿಷಯ ಸಂಕೇತ : 370** | **ಗರಿಷ್ಠ ಅಂಕಗಳು : 100**

## ಸೂಚನೆಗಳು

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಅಮುದ್ರಿತ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿಗಳು ಕಂಡುಬಂದಲ್ಲಿ ನಿಮ್ಮ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆ ಪತ್ರಿಕೆಯೊಂದಿಗೆ ಬದಲಾಯಿಸಿ ಕೊಳ್ಳತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪತ್ರಿಕೆಯ ಶ್ರೇಣಿಯು, ತಮ್ಮ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಪ್ರಶ್ನೆಪತ್ರಿಕೆಯ ಶ್ರೇಣಿಯಾಗಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ವ್ಯತ್ಯಾಸಗಳು ಕಂಡುಬಂದಲ್ಲಿ, ಸಂವೀಕ್ಷಕರ ಗಮನಕ್ಕೆ ತರುವುದು ಮತ್ತು ಪ್ರಶ್ನೆಪತ್ರಿಕೆಯ ಶ್ರೇಣಿಯು ತಮಗೆ ಹೊಂದುವ (ಅದೇ) ಪ್ರಶ್ನೆ ಪತ್ರಿಕೆಯಾದ ಮತ್ತು ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಶ್ರೇಣಿಯ ಪ್ರಶ್ನೆ ಪತ್ರಿಕೆಯನ್ನೇ ಪಡೆಯತಕ್ಕದ್ದು.**
3. ಪಕ್ಕದಲ್ಲಿ ಒದಗಿಸಿರುವ ಪ್ರಶ್ನೆಪತ್ರಿಕೆಯ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೋಂದಣಿ ಸಂಖ್ಯೆ | | | | | | |
|---|---|---|---|---|---|---|
| 9 | 1 | L | 7 | 8 | 0 | 1 |

4. **ಈ ಪ್ರಶ್ನೆ ಪುಸ್ತಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.** ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಓ.ಎಂ.ಆರ್. ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು.** ಓ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.** ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆ ಹಾಳೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಓ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಓ.ಎಂ.ಆರ್. ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

***Note : English version of the instructions is printed on the back cover of this booklet.***

www.shikarat.com

**ಸೂಚನೆ :** ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ತುಂಬಲು ನಾಲ್ಕು ಉತ್ತರ ನೀಡಿದೆ. ಅವುಗಳಲ್ಲಿ ಸೂಕ್ತವಾದುದನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ 1 – 5)

ಉದಾಹರಣೆ: ಮೀನ್ ಎಂದರೆ

(1) ಹೊಳೆಯುವ

(2) ಮೀಯು

(3) ಮೇಯು

(4) ಆಕಾಶ

ಇಲ್ಲಿ "ಹೊಳೆಯುವ" ಎಂಬುದು "ಮೀನ್"ನ ಅರ್ಥವನ್ನು ಹೇಳುವ ಪದ ಆದುದರಿಂದ (1) ನ್ನು ಗುರುತಿಸಬೇಕು.

1. "ಸೊರಗು" ಎಂದರೆ

(1) ಬೆಂಡಾಗು

(2) ತೆಳ್ಳಗಾಗು

(3) ಬಾಗು

(4) ಇಲ್ಲವಾಗು

2. "ತೃಷೆ" ಎಂದರೆ

(1) ನೆನೆ

(2) ಹಸಿವು

(3) ತೊಂದರೆ

(4) ಬಾಯಾರಿಕೆ

3. "ಕಸವರ" ಎಂದರೆ

(1) ಶುಚಿಯಾದ

(2) ಒಳ್ಳೆಯ

(3) ಬೆಲೆಬಾಳುವ

(4) ಬಂಗಾರ

4. "ಕಲಹ" ಎಂದರೆ

(1) ಕಲಕು

(2) ಗೊಂದಲ

(3) ಜಗಳ

(4) ಕಾಲವಾಗು

5. "ಪದ್ಮ" ಎಂದರೆ

(1) ತಾವರೆ

(2) ಪತ್ರ

(3) ಧೈರ್ಯಶಾಲಿ

(4) ಪಾವನ

www.shikarat.com

***ಸೂಚನೆ :*** *ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಸಮಾನವಾದ ಅಂಶವಿರುವ ಮೂರು ಪದಗಳಿವೆ. ಭಿನ್ನವಾಗಿ ಉಳಿದಿರುವ ಪದವನ್ನು ಗುರುತಿಸಿ. **(ಪ್ರಶ್ನೆ ಸಂಖ್ಯೆ 6 – 11)***

ಉದಾಹರಣೆ :

(1) ಚುನಾವಣೆ

(2) ಆಸ್ಪತ್ರೆ

(3) ಮುಖ್ಯಮಂತ್ರಿ

(4) ಭಾಷಣ

ಇವುಗಳಲ್ಲಿ (1), (3), (4) ರಾಜಕೀಯಕ್ಕೆ ಸಂಬಂಧಿಸಿದ ಪದಗಳು ಭಿನ್ನರೂಪ (2) ಆಸ್ಪತ್ರೆ ಅದ್ದರಿಂದ (2) ನ್ನು ಗುರುತಿಸಬೇಕು.

**6.** (1) ವದನ

(2) ಮುಖ

(3) ಮಖ

(4) ಆನನ

**7.** (1) ಮರ

(2) ವೃಕ್ಷ

(3) ತರು

(4) ಬಳ್ಳಿ

**8.** (1) ಉದಕ

(2) ಜಳಕ

(3) ಅಭ್ಯಂಜನ

(4) ಸ್ನಾನ

**9.** (1) ಇಮ್ಮಡಿ

(2) ದಮ್ಮಡಿ

(3) ಮುಮ್ಮಡಿ

(4) ನಾಲ್ಮಡಿ

**10.** (1) ಹುಲಿ

(2) ದ್ವೀಪಿ

(3) ಪುಂಡರೀಕ

(4) ಸಿಂಹ

**11.** (1) ಇಳೆ

(2) ಧರೆ

(3) ವಸುಂಧರೆ

(4) ಸುಖದೊರೆ



www.shikarat.com

***ಸೂಚನೆ : ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಒಂದು ಮಾತ್ರ ಅಚ್ಚ ಕನ್ನಡ ಪದ. ಉಳಿದ ಮೂರು ಅನ್ಯ ಭಾಷಾ ಪದಗಳು ಕನ್ನಡ ಪದವನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ 12 – 15)***

ಉದಾಹರಣೆ :

(1) ಮೂಡಣ

(2) ಪೋಲೀಸ್

(3) ಖಾನಾವಳಿ

(4) ಸಾಬೂನು

ಇಲ್ಲಿ 'ಮೂಡಣ' ಎಂಬುದು ಅಚ್ಚ ಕನ್ನಡ ಪದ, ಆದುದರಿಂದ (1) ನ್ನು ಗುರ್ತಿಸಬೇಕು.

**12.** (1) ಕಾಗದ

(2) ಮೈದಾನ

(3) ಮೂರಾಬಟ್ಟೆ

(4) ಮೊಸರು

**13.** (1) ಸೂರ್ಯ

(2) ಇನ

(3) ಮಾರ್ತಾಂಡ

(4) ನೇಸರು

**14.** (1) ದೇವಸ್ಥಾನ

(2) ದೇವಾಲಯ

(3) ಗುಡಿ

(4) ಮಂದಿರ

**15.** (1) ಜಮೀನು

(2) ಗುಲಾಮ

(3) ತಂಬಾಕು

(4) ನೆರೆಹೊರೆ

***ಸೂಚನೆ : ಈ ಕೆಳಗೆ ಕೆಲವು ಕನ್ನಡದ ನುಡಿಗಟ್ಟುಗಳನ್ನು ಅವುಗಳ ಮುಂದೆ ನಾಲ್ಕು ಪರ್ಯಾಯ ರೂಪಗಳನ್ನು ನೀಡಿದೆ. ನುಡಿಗಟ್ಟಿನ ಅರ್ಥವನ್ನು ವಿವರಿಸುವ ರೂಪವನ್ನು ಆಯ್ಕೆಮಾಡಿ ಗುರುತಿಸಿ. (ಪ್ರಶ್ನೆ ಸಂಖ್ಯೆ 16 – 19)***

ಉದಾಹರಣೆ : 'ಕರತಲಾಮಲಕ'

(1) ಕೈಚಳಕ ತೋರು

(2) ಚೆನ್ನಾಗಿ ತಿಳಿದುಕೊಂಡದ್ದು

(3) ಕೈಯಿಂದ ಮುಖದ ತನಕ

(4) ಗೊತ್ತು ಎಂಬ ಅಹಂಕಾರ

ಇಲ್ಲಿ 'ಚೆನ್ನಾಗಿ ತಿಳಿದುಕೊಂಡದ್ದು' ಸರಿಯಾದ ಅರ್ಥ, ಆದ್ದರಿಂದ (2) ನ್ನು ಗುರ್ತಿಸಬೇಕು.



www.shikarat.com

16. ಎಳೆನಿಂಬೆಕಾಯಿ

(1) ಮಿಡಿನಿಂಬೆಕಾಯಿ

(2) ಹುಳಿನಿಂಬೆಕಾಯಿ

(3) ಅನುಭವಿ

(4) ಅನನುಭವಿ

17. ಉಗುರುಕಡಿ

(1) ಉಗುರುತಿನ್ನು

(2) ಚಿಂತೆನೀಡು

(3) ಚಿಂತಿಸದವ

(4) ಚಿಂತಾಕ್ರಾಂತನಾಗು

18. ಕೈಕಚ್ಚು

(1) ಕೈಕಚ್ಚಿಕೊಂಡ

(2) ನಷ್ಟವಾಗು

(3) ಫೇಲಾಗು

(4) ಲಾಭವಾಗುವುದು

19. ಚಾಪೆಕೆಳಗೆ ತೂರು

(1) ಬುದ್ಧಿವಂತಿಕೆ ತೋರು

(2) ರಂಗೋಲಿ ಕೆಳಗೆನುಗ್ಗು

(3) ಚತುರತೆ

(4) ಚಮತ್ಕಾರತೆ

*ಸೂಚನೆ :* ಕೆಳಗೆ ಕೊಟ್ಟಿರುವ ಪದಗಳಿಗೆ (ಪ್ರಶ್ನೆ ಸಂಖ್ಯೆ **20 – 25**) ವಿರುದ್ಧಾರ್ಥಕ ಪದಗಳನ್ನು ಗುರ್ತಿಸಿ.

ಉದಾಹರಣೆ : ಅಂತರ್ವಾಣಿ

(1) ಹೊರವಾಣಿ

(2) ದುರ್ವಾಣಿ

(3) ಬಹಿರ್ವಾಣಿ

(4) ಒಳಗಿನವಾಣಿ

ಇಲ್ಲಿ (3) ಬಹಿರ್ವಾಣಿ ಸರಿಯಾದ ಉತ್ತರ ಆದ್ದರಿಂದ (3) ನ್ನು ಗುರುತಿಸಿ.

20. ಅರಳು

(1) ಹೊರಳು

(2) ತಿರುಳು

(3) ಮುದುಡು

(4) ಕದಡು

21. ಮಿಲನ

(1) ವಿಲೀನ

(2) ತಲ್ಲೀನ

(3) ಅಚ್ಛೇದಿನ

(4) ವಿಚ್ಛೇದನ



www.shikarat.com

22. ಪಕ್ಷಪಾತ

(1) ನಿಷ್ಪಕ್ಷಪಾತ

(2) ಪಕ್ಷಜಾತ

(3) ಪಕ್ಷಭೇದ

(4) ಪಕ್ಷದಾತ

23. ಕನಿಷ್ಠ

(1) ಕೀಳು

(2) ಅನಿಷ್ಠ

(3) ಗರಿಷ್ಠ

(4) ಪಾಪಿಷ್ಠ

24. ನಲಿವು

(1) ಒಲವು

(2) ಸಂತೋಷ

(3) ನೋವು

(4) ಸುಖ

25. ಸೊರಗು

(1) ಮರಗು

(2) ಸೊಕ್ಕು

(3) ಬಿಕ್ಕು

(4) ಕೊರಗು

*ಸೂಚನೆ : ಕೆಳಗಿನ ಪದಗಳಿಗೆ ಅವುಗಳ ಮುಂದೆ ಸೂಚಿಸಿದ ಪರ್ಯಾಯ ರೂಪಗಳಲ್ಲಿ ಸಮಾನಾರ್ಥಕವಾದ ಅಥವಾ ಅತಿ ಸಮೀಪದ ಅರ್ಥವುಳ್ಳ ರೂಪಗಳನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ 26 – 30)*

ಉದಾಹರಣೆ : ಕಾನನ ಪದದ ಸಮಾನಾರ್ಥಕ

(1) ಕತ್ತಲು

(2) ತೋಟ

(3) ಕಾಡು

(4) ಕಾಡುವುದು

ಇಲ್ಲಿ 'ಕಾಡು' ಎಂಬುದು ಸರಿಯಾದ ಉತ್ತರ. ಅದ್ದರಿಂದ (3) ನ್ನು ಗುರ್ತಿಸಬೇಕು.

26. "ಕಾಂತಾರ" ಪದದ ಸಮಾನಾರ್ಥಕ

(1) ಕಠಿಣ

(2) ಬಯಲು

(3) ಕಾನನ

(4) ಫಲ

27. 'ಸಮುದ್ರ' ಈ ಪದದ ಸಮಾನಾರ್ಥಕ ______ ಆಗಿದೆ.

(1) ತಟಾಕ, ಸರೋವರ

(2) ಹಳ್ಳ ಕೊಳ್ಳ

(3) ಕಡಲು, ಸಾಗರ

(4) ನದಿ, ತೊರೆ



www.shikarat.com

28. "ಅಗ್ಗಿಣಿ" ಎಂದರೆ

(1) ಬೆಂಕಿ

(2) ಹಗ್ಗ

(3) ಅರಿವು

(4) ನೀರು

29. "ಅರಿಲ್" ಪದದ ಸಮಾನಾರ್ಥಕ ಪದ

(1) ನಕ್ಷತ್ರ

(2) ಹೂವು

(3) ಬಿಳಿಲು

(4) ಜ್ಞಾನ

30. "ಹಾವುಗೆ" ಪದದ ಸಮಾನಾರ್ಥಕ ಪದ

(1) ಹಾವು

(2) ಪಾದುಕೆ

(3) ಹಸಿವು

(4) ಆಸೆ

***ಸೂಚನೆ :*** *ಕೆಳಗಿನ ಪದಗಳನ್ನು ಬಿಡಿಸಿ ಬರೆದಿದೆ. ಅವುಗಳಲ್ಲಿ ಸರಿಯಾದುದನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ 31 – 33)*

ಉದಾಹರಣೆ : "ಮೆಲ್ನುಡಿ" ಇದನ್ನು ಬಿಡಿಸುವ ಕ್ರಮ

(1) ಮೆಲ್ಲಿತು + ನುಡಿ

(2) ಮೆಲ್ಲ + ನುಡಿ

(3) ಮೆಲ್ಲನೆ + ನುಡಿ

(4) ಮೆಲ್ಲನೆಯ + ನುಡಿ

ಇಲ್ಲಿ 'ಮೆಲ್ಲನೆ + ನುಡಿ' ಎಂಬುದು ಸರಿಯಾದ ಉತ್ತರ. ಆದ್ದರಿಂದ (3) ನ್ನು ಗುರ್ತಿಸಬೇಕು.

31. "ನೀಲೋತ್ಪಲ" ಇದನ್ನು ಬಿಡಿಸಿಬರೆದರೆ

(1) ನೀಲು + ಉತ್ಪಲ

(2) ನೀಲೋ + ಉತ್ಪಲ

(3) ನೀಲವು + ಉತ್ಪಲ

(4) ನೀಲವಾದ + ಉತ್ಪಲ

32. "ಗುರುವೊಬ್ಬನು" ಈ ಪದವನ್ನು ಬಿಡಿಸಿ ಬರೆದರೆ

(1) ಗುರುವು + ಒಬ್ಬನೆ

(2) ಗುರು + ಒಬ್ಬನು

(3) ಗುರುವೆ + ಒಬ್ಬನು

(4) ಗುರ್ + ಒಬ್ಬನ್

33. "ಮೈದಡವಿ" ಇದನ್ನು ಬಿಡಿಸಿ ಬರೆದರೆ

(1) ಮೈ + ದಡವಿ

(2) ಮೈ + ತಡವಿ

(3) ಮೈಯನ್ನು + ತಡವಿ

(4) ಮೈಯನ್ನು + ದಡವಿ

www.shikarat.com

*ಸೂಚನೆ : ಮುಂದೆ ಕೊಡಲಾದ ನಾಲ್ಕು ರೂಪಗಳಲ್ಲಿ ಸರಿಯಾದುದನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ **34 – 37**)*

*ಉದಾಹರಣೆ :*

(1) ಗ್ರಹಸ್ತ

(2) ಗೃಹಸ್ಥ

(3) ಗ್ರುಹಸ್ಥ

(4) ಗ್ರೃಹಸ್ಥ

ಇಲ್ಲಿ 'ಗೃಹಸ್ಥ' ಸರಿಯಾದ ಉತ್ತರ. ಅದ್ದರಿಂದ (2) ನ್ನು ಗುರ್ತಿಸಬೇಕು.

**34.** (1) ಮಹದನಂದ

(2) ಮಹದಾನಂದ

(3) ಮಾಹದನಂದ

(4) ಮಹದನಾಂದ

**35.** (1) ಅತ್ಯುತ್ಸಾಹ

(2) ಅತ್ಯೂತ್ಸಾಹ

(3) ಅತ್ಯತ್ಸಾಹ

(4) ಅತ್ಯುತ್ಸಹ

**36.** (1) ಆಘತಕಾರಿ

(2) ಆಗಾತಕಾರಿ

(3) ಆಘತಾಕಾರಿ

(4) ಆಘಾತಕಾರಿ

**37.** (1) ಅತ್ಯಾಶ್ಚರ್ಯ

(2) ಅತ್ಯಶ್ಚರ್ಯ

(3) ಅತ್ಯಾಶ್ಚಾರ್ಯ

(4) ಅತ್ಯಶ್ಚಾರ್ಯ

***ಸೂಚನೆ :*** ಕೆಳಗಿನ ವಾಕ್ಯಗಳಲ್ಲಿ (*ಪ್ರಶ್ನೆ ಸಂಖ್ಯೆ **38 – 41***) ಗೆರೆ ಎಳೆಯಲಾದ ಪದಗಳಲ್ಲಿ ದೋಷವಿದ್ದರೆ ಅದನ್ನು ಸರಿಪಡಿಸಲು ಮುಂದೆ ಕೊಟ್ಟಿರುವ ಪರ್ಯಾಯ ರೂಪಗಳಲ್ಲಿ ಸೂಕ್ತವಾದುದನ್ನು ಗುರ್ತಿಸಿ. ದೋಷವಿಲ್ಲದಿದ್ದರೆ ಸುಧಾರಣೆ ಬೇಕಿಲ್ಲ, ಆಗ *(4)* ನ್ನು ಗುರುತಿಸಿ.

ಉದಾಹರಣೆ : ಮಕ್ಕಳು ಸಂಗೀತವನ್ನು ಸುಸ್ರಾವ್ಯವಾಗಿ **ಆಡಿದರು**.

(1) ಹಾಡಿದರು

(2) ಆಲಿಸಿದರು

(3) ಮಾಡಿಸಿದರು

(4) ಸುಧಾರಣೆ ಬೇಕಿಲ್ಲ

ಇಲ್ಲಿ "ಆಡಿದರು" ಎಂಬುದು ದೋಷವಾಗಿದ್ದು "ಹಾಡಿದರು" ಎಂದಿರಬೇಕು. ಆದುದರಿಂದ (1) ನ್ನು ಗುರುತಿಸಬೇಕು.

www.shikarat.com

38. ಭಾರತವು ಸಂಸಂಕೃತಿಯ ನಾಡು.

(1) ಸಂಸಕೃತಿ

(2) ಸಂಸ್ಕೃತಿ

(3) ಸಸಂಕೃತಿ

(4) ಸುಧಾರಣೆ ಬೇಕಿಲ್ಲ

39. ಶಿಕ್ಷಣ ವ್ಯವಸ್ಥೆಯ ಕೇಂದ್ರ ಬಿಂದು ಮಕ್ಕಳೇ ಆಗಿವೆ.

(1) ವ್ಯವಸ್ಥೆ

(2) ವವ್ಯಸ್ಥೆ

(3) ವ್ಯವಸ್ತೆ

(4) ಸುಧಾರಣೆ ಬೇಕಿಲ್ಲ

40. ನಾಲ್ಕು ಸಾಲಿನ ಪದ್ಯಕ್ಕೆ ಚತುಷ್ಪದಿ ಎನ್ನುವರು.

(1) ಚತುಷ್ಪಾದಿ

(2) ಚತುಷ್ಪಧ

(3) ಚುತುಷ್ಪದಿ

(4) ಸುಧಾರಣೆ ಬೇಕಿಲ್ಲ

41. ಗುರುಗಳ ದ್ರಷ್ಟಿಕೋನ ಸರಿಯಾಗಿರಲಿಲ್ಲ.

(1) ದೃಸ್ಟಿಕೋನ

(2) ದೃಷ್ಟಿಕೋನ

(3) ದಷ್ಟಕೋನ

(4) ಸುಧಾರಣೆ ಬೇಕಿಲ್ಲ



www.shikarat.com

*ಸೂಚನೆ : ಕೆಳಗಿನವುಗಳಲ್ಲಿ ಖಾಲಿ ಇರುವ ಜಾಗಕ್ಕೆ ಸರಿಯಾದ ಉತ್ತರವನ್ನು ಸೂಚಿಸಿರಿ. (ಪ್ರಶ್ನೆ ಸಂಖ್ಯೆ 42 – 46)*

**42.** 'ಬೃಹಚ್ಚಕ್ರ' ಪದವು ________ ಸಂಧಿಗೆ ಉದಾಹರಣೆಯಾಗಿದೆ.

(1) ಗುಣ ಸಂಧಿ

(2) ವೃದ್ಧಿ ಸಂಧಿ

(3) ಶ್ಚುತ್ವ ಸಂಧಿ

(4) ಜಶ್ತ್ವ ಸಂಧಿ

**43.** ಹಿಮಾಲಯ ಪರ್ವತ ಎಂಬುದು ________ .

(1) ಕ್ರಿಯಾಪದ

(2) ನಾಮಪದ

(3) ಧಾತು

(4) ವಿಶೇಷಣ

**44.** ಹಣ್ಣು ಹಂಪಲ ________ ಪದಕ್ಕೆ ಉದಾಹರಣೆ.

(1) ನುಡಿಗಟ್ಟು

(2) ಅನುಕರಣ

(3) ಜೋಡಿಪದ

(4) ದ್ವಿರುಕ್ತಿ

**45.** ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರಗಳಿಗೆ ________ ಎನ್ನುತ್ತೇವೆ.

(1) ವ್ಯಂಜನಗಳು

(2) ಸ್ವರಗಳು

(3) ಅಲ್ಪಪ್ರಾಣ

(4) ಅನುನಾಸಿಕ

**46.** 'ಗುರು' ಪದದಲ್ಲಿರುವ ಸ್ವರಗಳು ________ .

(1) ಒಂದು

(2) ಎರಡು

(3) ನಾಲ್ಕು

(4) ಐದು



www.shikarat.com

*ಸೂಚನೆ :* ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ **47 – 51**) (1) (2) (3) ಎಂಬ ಗೆರೆ ಎಳೆದ ಭಾಗಗಳಿವೆ. ಈ ಯಾವುದೇ ಭಾಗದಲ್ಲಿ ವ್ಯಾಕರಣ, ಕಾಗುಣಿತ ಅಥವಾ ಚಿಹ್ನೆಗೆ ಸಂಬಂಧಿಸಿದ ದೋಷವಿದ್ದರೆ ಆ ಭಾಗವನ್ನು ಗುರ್ತಿಸಿ. ದೋಷವಿಲ್ಲದಿದ್ದರೆ "ತಪ್ಪಿಲ್ಲ" ಎಂಬ ನಾಲ್ಕನೇ (4) ಭಾಗವನ್ನು ಗುರುತಿಸಿ.

ಉದಾಹರಣೆ :

ಈ ಜೀವಸೃಷ್ಟಿಗೆ ಪ್ರಕೃತಿ (1) ಕಾರಣವಾದಂತೆ (2)

ಜೀವನಾಶಕ್ಕೂ ಪ್ರಕೃತಿ ಕಾರಣವಾಗುತ್ತದೆ. (3)

ತಪ್ಪಿಲ್ಲ (4)

ಇದರ (3) ಭಾಗದಲ್ಲಿ ಪುನರಾವರ್ತನೆಯಾಗಿರುವ ಪ್ರಕೃತಿ ಪದ ತಪ್ಪು ಆದ್ದರಿಂದ (3) ತಪ್ಪೆಂದು ಭಾವಿಸಿ ಗುರುತಿಸಬಹುದು.

**47.** ದುಡಿಮೆಯ (1) ಧಣುವಿಲ್ಲದಿರುವುದೇ (2) ರೋಗಕ್ಕೆದಾರಿ. (3) ತಪ್ಪಿಲ್ಲ (4)

**48.** ಗುರುಗಳ ಹತ್ತಿರ (1) ವಿದ್ಯಾರ್ಥಿಗಳು (2) ವಿಧೇಯತೆಯಿಂದ ವರ್ತಿಸಬೇಕು. (3) ತಪ್ಪಿಲ್ಲ (4)

**49.** ಯಾವುದೇ ಕೆಲಸವನ್ನು (1) ಮಾಡಿ ಯಸಸ್ವೀಯಾಗಲು (2) ಪೂರ್ವಸಿದ್ಧತೆ ಅಗತ್ಯ. (3) ತಪ್ಪಿಲ್ಲ (4)

**50.** ಆರೋಗ್ಯಕ್ಕೆ (1) ಯೋಗಾಭ್ಯಾಸ (2) ಹೊಳ್ಳೆಯದು. (3) ತಪ್ಪಿಲ್ಲ (4)

**51.** ಮೃತಭಾಷೆಯೇ (1) ಶಿಕ್ಷಣ (2) ಮಾಧ್ಯಮವಾಗಬೇಕು. (3) ತಪ್ಪಿಲ್ಲ (4)

www.shikarat.com

*ಸೂಚನೆ : ಕೆಳಗಿನವುಗಳಲ್ಲಿ ಖಾಲಿ ಇರುವ ಜಾಗಕ್ಕೆ ಸರಿಯಾದ ಉತ್ತರವನ್ನು ಸೂಚಿಸಿರಿ. (ಪ್ರಶ್ನೆ ಸಂಖ್ಯೆ 52 – 60)*

**52.** 'ಮಾಡನು' ಇದು ________ ಕ್ರಿಯಾಪದವಾಗಿದೆ.

(1) ನಿಷೇದಾರ್ಥಕ

(2) ವಿಧ್ಯರ್ಥಕ

(3) ವರ್ತಮಾನಕಾಲ

(4) ಭವಿಷ್ಯತ್‌ಕಾಲ

**53.** 'ಜೋಗಿ' ಪದದ ತತ್ಸಮ ರೂಪ ________ .

(1) ಬೋಗಿ

(2) ಗೂಗಿ

(3) ಯೋಗಿ

(4) ಜೋಗ

**54.** ಆದ್ಯವಚನಕಾರ ಜೇಡರದಾಸಿಮಯ್ಯನ 'ಅಂಕಿತ' ________ .

(1) ಗುಹೇಶ್ವರ

(2) ರಾಮನಾಥ

(3) ಆದಿಕೇಶವ

(4) ಕಪಿಲಸಿದ್ಧಮಲ್ಲಿಕಾರ್ಜುನ

**55.** ಈ ಕೆಳಗಿನ ಪದಗಳಲ್ಲಿ ________ ಅವ್ಯಯ ಪದವಲ್ಲ.

(1) ಚೆನ್ನಾಗಿ

(2) ಮೆಲ್ಲಗೆ

(3) ಸುಮ್ಮನೆ

(4) ಮನೆ

**56.** ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತುಂಬಾ ಪ್ರಾಚೀನವಾದ ಕೃತಿ ________ .

(1) ಕವಿರಾಜಮಾರ್ಗ

(2) ವಡ್ಡಾರಾಧನೆ

(3) ಆದಿಪುರಾಣ

(4) ವಿಕ್ರಮಾರ್ಜುನ ವಿಜಯ

**57.** 'ಕರ್ನಾಟಕದ ಶಿವಕಾಶಿ' ಎಂದೇ ಪ್ರಸಿದ್ಧಿ ಪಡೆದ ಊರು ________ .

(1) ಧರ್ಮಸ್ಥಳ

(2) ತುಮಕೂರು

(3) ಗದಗ

(4) ಗೋಕರ್ಣ



www.shikarat.com

58. ಕನ್ನಡದಲ್ಲಿ 'ಜ್ಞಾನಬೋಧಕ' ಎಂಬ ಪತ್ರಿಕೆಯನ್ನು ________ ಸ್ಥಾಪಿಸಿದರು.

(1) ವೆಂಕಟ ರಂಗೋಕಟ್ಟಿ

(2) ಹರ್ಡೇಕರ ಮಂಜಪ್ಪ

(3) ಬಸಪ್ಪ ಶಾಸ್ತ್ರಿ

(4) ಆಲೂರು ವೆಂಕಟರಾಯ

59. ಹದಿನಾಲ್ಕು ಸಾಲಿನ ಕವಿತೆಗೆ ________ ಎನ್ನುತ್ತಾರೆ.

(1) ಷಟ್ಪದಿ

(2) ಸಾನೆಟ್

(3) ಕಂದ

(4) ಕಥನಕವನ

60. ಮೂಲಧಾತುವಿಗೆ ಪ್ರತ್ಯಯ ಸೇರಿದಾಗ ________ ಎಂದು ಕರೆಯುತ್ತಾರೆ.

(1) ಸಾಧಿತ ಧಾತು

(2) ಮೂಲಪದ

(3) ಕ್ರಿಯಾಪದ

(4) ಆಖ್ಯಾತ ಪ್ರತ್ಯಯ

**ಸೂಚನೆ :** ಮುಂದಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 61 – 65) ಪದಗಳು ಕ್ರಮಬದ್ಧವಾಗಿಲ್ಲ. ಅವು ಅರ್ಥಪೂರ್ಣವಾಗುವಂತೆ ಗೆರೆ ಎಳೆದು ಸೂಚಿಸಿದ ಭಾಗಗಳನ್ನು ಪುನಃ ಜೋಡಿಸಿ. ಅವುಗಳ ಅನುಕ್ರಮವನ್ನು ಗುರುತಿಸಿ.

ಉದಾಹರಣೆ :

| ನೋಡಿ | ದುರುಗುಟ್ಟಿ | ಸುಟ್ಟುರಿಯುವಂತೆ |
|---|---|---|
| P | Q | R |

| ದೌಡಾಯಿಸಿದಳು |
|---|
| S |

(1) QRPS

(2) RSPQ

(3) RQPS

(4) RPQS

ಇಲ್ಲಿ QRPS ಎಂಬುದು ಸರಿಯಾದ ಕ್ರಮ ಆದುದರಿಂದ ಇಲ್ಲಿ (1) ಅನ್ನು ಗುರುತಿಸಬೇಕು.

www.shikarat.com

61. ಇಂಧನವನ್ನು ಉಳಿಸಿರಿ (P) ಸ್ವಾವಲಂಬನೆಗೆ (Q) ಭಾರತದ (R) ಇಂಧನ ಅತ್ಯಮೂಲ್ಯವಾದುದು. (S)

(1) R Q P S

(2) R S P Q

(3) S Q R P

(4) P R Q S

62. ವಿಮರ್ಶೆ ಎಂದರೆ (P) ಬೆಲೆಕಟ್ಟುವಕೆಲಸ (Q) ಒಂದು ಕೃತಿಯನ್ನು ವಿಶ್ಲೇಷಿಸುವ (R) ವಿವರಿಸುವ ವ್ಯಾಖ್ಯಾನಿಸುವ. (S)

(1) R S P Q

(2) P R S Q

(3) Q R P S

(4) Q P S R

63. ಗುಲಾಬಿ (P) ಸುಂದರವಾದ (Q) ಬಹು (R) ಪುಷ್ಪ. (S)

(1) Q R P S

(2) R Q S P

(3) P Q R S

(4) S P Q R

64. ಬಾರದವಳು (P) ಕುಣಿಯಲಿಕ್ಕೆ (Q) ಡೊಂಕೆಂದಳು (R) ನೆಲ. (S)

(1) R S P Q

(2) Q P S R

(3) Q R P S

(4) P Q R S

65. ಪಂಪ (P) ಕನ್ನಡದ (Q) ಪೊನ್ನ ಮತ್ತು ರನ್ನರು (R) ರತ್ನತ್ರಯರು. (S)

(1) P S R Q

(2) R Q P S

(3) P R Q S

(4) S Q P R





www.shikarat.com

*ಸೂಚನೆಗಳು :* *ಈ ಕೆಳಗೆ (ಪ್ರಶ್ನೆ ಸಂಖ್ಯೆ **66 – 70**) P Q R S ಎಂಬ ನಾಲ್ಕು ವಾಕ್ಯಗಳನ್ನು ಕೊಡಲಾಗಿದೆ. ಈ ವಾಕ್ಯಗಳು ಸ್ಥಾನಪಲ್ಲಟವಾಗಿವೆ. ಅವುಗಳನ್ನು ಅರ್ಥಪೂರ್ಣವಾಗಿ ಜೋಡಿಸುವ ಉತ್ತರವನ್ನು ಗುರುತಿಸಬೇಕು.*

ಉದಾಹರಣೆ :

P. ಪುಲಿಗೆರೆ, ಕಿಸುವೊಳಲ್, ಕೊಪ್ಪಳ ಮತ್ತು ಒಕ್ಕುಂದ ಇವೇ ಆ ನಾಲ್ಕು ನಗರಗಳು.

Q. ಒಂಭತ್ತನೆಯ ಶತಮಾನದಲ್ಲಿ ಕನ್ನಡನಾಡು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿತ್ತು.

R. ಆ ನಾಡಿನಲ್ಲಿನ ನಾಲ್ಕು ನಗರಗಳ ಮಧ್ಯದ ಕನ್ನಡವೇ ಕನ್ನಡದ ತಿರುಳೆಂದು ಕವಿ ಹೇಳಿದ್ದಾನೆ.

S. ಆ ನಾಡಿನಲ್ಲಿ ವಾಸವಾಗಿದ್ದ ಜನತೆಯ ಉನ್ನತ ಸಂಸ್ಕೃತಿಯಿಂದಾಗಿ ಇಡೀ ವಿಶ್ವದಲ್ಲಿ ಕನ್ನಡ ನಾಡು ಒಂದು ವಿಶೇಷ ಸ್ಥಾನವನ್ನು ಪಡೆದಿತ್ತು.

(1) Q S R P

(2) S R Q P

(3) P Q R S

(4) R P Q S

ಇಲ್ಲಿ ಸರಿಯಾದ ಉತ್ತರ Q S R P ಆದುದರಿಂದ (1) ನ್ನು ಗುರುತಿಸಬೇಕು.

**66.** P. ಪಾರ್ಥೇನಿಯಂ ಹುಲ್ಲಿನಂತೆ ಮೌಢ್ಯವೂ ಸಹ ಯಾರ ನಿಯಂತ್ರಣಕ್ಕೂ ಸಿಗದೆ ನಿರಂತರವಾಗಿ ಬೆಳೆಯುತ್ತಿದೆ.

Q. ಇಂದಿನ ಶಿಕ್ಷಣ ಪದ್ಧತಿಯು ಅವಿದ್ಯಾವಂತ ಮೂಢಭಕ್ತಿಯ ವ್ಯಕ್ತಿಯನ್ನು ವಿದ್ಯಾವಂತ ಮೂಢಭಕ್ತಿಯ ವ್ಯಕ್ತಿಯನ್ನಾಗಿ ಪರಿವರ್ತಿಸುತ್ತಿದೆ.

R. ಅವಿದ್ಯಾವಂತ ಮೂಢಭಕ್ತಿಯ ವ್ಯಕ್ತಿಗಿಂತ ಮೂಢಭಕ್ತಿಯುಳ್ಳ ವಿದ್ಯಾವಂತ ವ್ಯಕ್ತಿಯು ಸಮಾಜಕ್ಕೆ ಹೆಚ್ಚು ಅಪಾಯಕಾರಿಯೆಂದರೆ ತಪ್ಪಾಗಲಾರದು.

S. ಮೌಢ್ಯವೂ ಸಹ ಯಾವ ನಿಯಂತ್ರಣಕ್ಕೂ ಸಿಗದೆ ನಿರಂತರವಾಗಿ ಬೆಳೆಯುತ್ತಿದೆ.

(1) Q P S R

(2) Q R P S

(3) P Q R S

(4) R Q S P

**67.** P. ಆಗಲೇ ಹಳ್ಳಿಯ ಹೆಂಗಸರು ಎದ್ದು ಬೀಸುವುದಕ್ಕೆ ಮೊದಲು ಮಾಡುವರು.

Q. ಬೀಸುವ ವೇಳೆಯೆಂದರೆ ಸಾಮಾನ್ಯವಾಗಿ ರಾತ್ರಿಯ ಕೊನೆಯ ಜಾವದ ಸಮಯ.

R. ಎಲ್ಲ ಪ್ರಾಣಿಗಳಿಗೂ ಸಕ್ಕರೆಯ ನಿದ್ದೆ ಕಾಲವದು.

S. ಆಗ ಎಲ್ಲೆಲ್ಲಿಯೂ ಶಾಂತತೆಯ ಸಾಮ್ರಾಜ್ಯವು ನೆಲೆಗೊಂಡಿರುವುದು.

(1) R S P Q

(2) Q R S P

(3) S P R Q

(4) Q S R P

www.shikarat.com

68. P. ಕನ್ನಡವು ಕರ್ನಾಟಕದ ಆಡಳಿತ ಭಾಷೆ ಎಂದು ಸರ್ಕಾರ ಘೋಷಿಸಿದ್ದರೂ ಅದು ಕಾರ್ಯರೂಪಕ್ಕೆ ಬರದೇ ಸುತ್ತೋಲೆಯಾಗಿಯೇ ಉಳಿದಿದೆ.

Q. ಈ ಬಗ್ಗೆ ಸರ್ಕಾರ ತುರ್ತು ಆದೇಶ ಹೊರಡಿಸಿ ಅದು ಕಾರ್ಯರೂಪಕ್ಕೆ ಬರುವಂತೆ ಜಾಗೃತ ದಳವನ್ನು ರಚಿಸಬೇಕು.

R. ನ್ಯಾಯಾಂಗ ರಂಗ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಕನ್ನಡ ಭಾಷೆಗೆ ಮೊದಲು ಮನ್ನಣೆ ದೊರೆಯಬೇಕು.

S. ಕನ್ನಡ ಬಳಸದ ಅಧಿಕಾರಿಗಳ ವಿರುದ್ಧ ತುರ್ತಾಗಿ ಕ್ರಮ ಜರುಗಿಸಬೇಕಾಗಿದೆ.

(1) P Q R S

(2) P R Q S

(3) R Q P S

(4) S P Q R

69. P. ಅದರ ಒಂದೊಂದು ಕೊಂಬೆಯೂ ಬಲ್ಮರದಂತೆ ಕೈಚಾಚಿರುತ್ತದೆ.

Q. ಅದರ ಗಾತ್ರವೂ ಏಳೆಂಟು ಜನರು ತಬ್ಬಿದರೂ ಸಾಲದು.

R. ಹಳ್ಳಿಯ ಹೊರಗಡೆ ಒಂದು ಹೆಮ್ಮರವಿರುತ್ತದೆ.

S. ಎತ್ತರವೋ ಕೊರಳು ಸೋತು ಕಣ್ಣು ದಣಿಯುವಷ್ಟು.

(1) R Q S P

(2) R P S Q

(3) R S P Q

(4) R Q P S

70. P. ಪ್ರಾಮಾಣಿಕ ಪ್ರಯತ್ನದಿಂದ ಎಂತಹ ಕಠಿಣ ಕಾರ್ಯವನ್ನೂ ಸುಲಭವಾಗಿ ಸಾಧಿಸಬಹುದು ಎಂಬ ವಿಶ್ವಾಸವಿರಬೇಕು.

Q. ಬೇರೆಯವರ ಬೆಂಬಲಕ್ಕಾಗಿ ಕಾದು ಕುಳಿತಿರಬಾರದು.

R. ನಿಮ್ಮ ಕಾರ್ಯಕ್ಕೆ ಅಂತಹವರು ತಡೆಯನ್ನುಂಟು ಮಾಡುತ್ತಾರೆ.

S. ಏಕೆಂದರೆ ನಮ್ಮ ಯಶಸ್ಸನ್ನು ಸಹಿಸಲಾರದವರಿರುತ್ತಾರೆ.

(1) P Q R S

(2) Q R P S

(3) Q S R P

(4) R P Q S

www.shikarat.com

**ಸೂಚನೆ** : ಕೆಳಗೆ ಕೊಡಲಾದ ಗಾದೆಗಳ ಅರ್ಥವನ್ನು ಗ್ರಹಿಸಿ ಪೂರ್ಣಗೊಳಿಸಿ. (ಪ್ರಶ್ನೆ ಸಂಖ್ಯೆ 71 – 74)

**71.** 'ತುಸು ತಿಂದರೂ _____' ತಿನ್ನಬಾರದು ಗಾದೆಯನ್ನು ಪೂರ್ಣಗೊಳಿಸಿರಿ.

(1) ವಿಷ

(2) ಕಸ

(3) ಸಿಹಿ

(4) ಉಪ್ಪು

**72.** ಊಟಕ್ಕೆ ಮುಂದಿರಬೇಕು, _____ ಹಿಂದಿರಬೇಕು.

(1) ಆಟಕ್ಕೆ

(2) ನೋಟಕ್ಕೆ

(3) ತಿಂಡಿಗೆ

(4) ಸ್ನಾನಕ್ಕೆ

**73.** ಎಮ್ಮೆ ಮೇಲೆ _________ ಹುಯ್ದಂಗೆ.

(1) ನೀರು

(2) ಮೆಳೆ

(3) ಮಳೆ

(4) ಕೆಂಡ

**74.** ಕಪ್ಪೆ ಹಿಡಿದು _____ ಹಾಕಿದಂಗೆ.

(1) ಮಡಕೆಗೆ

(2) ತಕ್ಕಡಿಗೆ

(3) ಚಕ್ಕಡಿಗೆ

(4) ಬಾವಿಗೆ

**ಸೂಚನೆ** : ಕೆಳಗೆ ಕೊಡಲಾದ ಒಗಟುಗಳನ್ನು ಬಿಡಿಸಿ, ಉತ್ತರ ಗುರ್ತಿಸಿ. (ಪ್ರಶ್ನೆ ಸಂಖ್ಯೆ 75 – 76)

**75.** ಸಂತೆ ತುಂಬಾ ಅವ್ವಾ ಮಗಳ್ದೇ ದರ್ಬಾರು.

(1) ಸೇರು, ಪಾವು

(2) ತಟ್ಟೆ, ಚೊಂಬು

(3) ಕೊಂಬು, ಕಹಳೆ

(4) ಸೂಜಿ, ದಾರ

**76.** ಸಾವಿರ ಕಣ್ಣಿನ ಸರದಾರನಾದರೂ ನೋಡುವುದು ಎರಡು ಕಣ್ಣಿನಲ್ಲಿ.

(1) ಜರಡಿ

(2) ಕೊಳಲು

(3) ನವಿಲು

(4) ಗಡಿಯಾರ

**ಸೂಚನೆ** : ಕೆಳಗಿನ ಪ್ರಶ್ನೆಗಳನ್ನು ಓದಿ ಉತ್ತರವನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ 77 – 90)

**77.** ಸಂಚಿಹೊನ್ನಮ್ಮ ರಚಿಸಿದ 'ಹದಿಬದೆಯಧರ್ಮ' ಎಂತಹ ಕಾವ್ಯ ?

(1) ಷಟ್ಪದಿ ಕಾವ್ಯ

(2) ಶೃಂಗಾರ ಕಾವ್ಯ

(3) ಚಂಪೂ ಕಾವ್ಯ

(4) ಸಾಂಗತ್ಯ ಕಾವ್ಯ



www.shikarat.com

78. 'ಪಯಣ' ಈ ಪದದ ಮೂಲರೂಪ ______.

(1) ಪಯಣ

(2) ಪ್ರಯಾಣ

(3) ಪ್ರಧಾನ

(4) ಪ್ರಣಯ

79. 'ಮಳೆಗಾಲ' ಎಂಬುದು ______.

(1) ದ್ವಿಗು ಸಮಾಸ

(2) ತತ್ಪುರುಷ ಸಮಾಸ

(3) ಅಂಶಿ ಸಮಾಸ

(4) ಕರ್ಮಧಾರೆಯ ಸಮಾಸ

80. 'ತಾಳುವಿಕೆಗಿಂತ ತಪವು ಇಲ್ಲ' ಎಂದ ಕೀರ್ತನಕಾರರು ______.

(1) ಕನಕದಾಸರು

(2) ಪುರಂದರ ದಾಸರು

(3) ಸರ್ವಜ್ಞ

(4) ವಾದಿರಾಜರು

81. ಕೆಳಗೆ ಕೊಟ್ಟಿರುವ ಪದಗಳಿಗೆ ವಿರುದ್ಧ ಪದವನ್ನು ಗುರುತಿಸಿ
'ವಿದ್ರೂಪ'

(1) ತದ್ರೂಪ

(2) ಸುದ್ರೂಪ

(3) ಸುರೂಪ

(4) ಕುರುಪ

82. 'ಸದ್ಬಳಕೆ' ಈ ಪದವನ್ನು ಬಿಡಿಸಿ ಬರೆಯಿರಿ

(1) ಸದ್ + ಬಳಕೆ

(2) ಸದ + ಬಳಕೆ

(3) ಸದ್ + ಭಳಕೆ

(4) ಸತ್ + ಬಳಕೆ

83. ಬರೆಯಲಿಲ್ಲ ಎಂಬುದು ______ ಪದ ಆಗಿದೆ.

(1) ಸಾಮಾನ್ಯರೂಪ

(2) ಕ್ರಿಯಾಪದ

(3) ನಿಷೇಧಾರ್ಥಕ

(4) ಗುಣವಾಚಕ

84. 'ಬೊಂಬಾಯಿ ಬೋಂಡ' ಎಂಬುದು ______ ವಿಶೇಷಣ.

(1) ಸಂಜ್ಞಾವಾಚಕ ವಿಶೇಷಣ

(2) ಗುಣವಾಚಕ ವಿಶೇಷಣ

(3) ನಿರ್ದಿಷ್ಟವಾಚಕ ವಿಶೇಷಣ

(4) ಪರಿಮಾಣವಾಚಕ ವಿಶೇಷಣ



www.shikarat.com

85. 'ಕುರುಕ್ಷೇತ್ರ' ಎಂಬ ಪದದಲ್ಲಿನ 'ತ್ರ' ಎಂಬ ಅಕ್ಷರವು ________ ಆಗಿದೆ.

(1) ದಪ್ಪ ಅಕ್ಷರ

(2) ಒತ್ತಕ್ಷರ

(3) ಮಹಾಪ್ರಾಣಾಕ್ಷರ

(4) ಧೀರ್ಘಾಕ್ಷರ

86. "ಕುರುಡು ಕಾಂಚಾಣ ಕುಣಿಯುತಲಿತ್ತೋ..." ಪದ್ಯವನ್ನು ರಚಿಸಿದ ಕವಿ ________ .

(1) ಕುವೆಂಪು

(2) ಡಿ.ಎಸ್. ಕರ್ಕಿ

(3) ಚೆನ್ನವೀರ ಕಣವಿ

(4) ದ.ರಾ. ಬೇಂದ್ರೆ

87. 'ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣಿನ ಗುಡಿಯೊಳಗೆ' ________ ಕವಿಯ ಕಾವ್ಯದ ಸಾಲುಗಳಾಗಿವೆ.

(1) ಬರಗೂರು ರಾಮಚಂದ್ರಪ್ಪ

(2) ಕುವೆಂಪು

(3) ಜಿ.ಎಸ್. ಶಿವರುದ್ರಪ್ಪ

(4) ಚಂದ್ರಶೇಖರ ಕಂಬಾರ

88. ಮುಸುರೆ ಕೈಯಿಂದ ಕಾಗೆ ಹೊಡೆಯುವುದಿಲ್ಲ ಇದರ ಅರ್ಥ ಏನೆಂದರೆ ?

(1) ಕೈ ತೊಳೆದುಕೊಳ್ಳನು

(2) ಕಾಗೆಗೆ ಮುಸರೆ ಹಾಕುವನು

(3) ಜಿಪುಣ

(4) ದಾನಸೂರ

89. 'ಬಾಲಕ ಚೆಂಡನ್ನು ಎಸೆದನು' ಈ ವಾಕ್ಯದ 'ಚೆಂಡನ್ನು' ಪದದಲ್ಲಿನ ವಿಭಕ್ತಿ ಪ್ರತ್ಯಯ ________ .

(1) ತೃತೀಯಾ

(2) ದ್ವಿತೀಯಾ

(3) ಸಪ್ತಮೀ

(4) ಚತುರ್ಥಿ

90. ಸಪ್ತ + ಪದಿ = ಸಪ್ತಪದಿ ಎಂಬುದು ________ ಸಮಾಸವಾಗಿದೆ.

(1) ಅಂಶಿಸಮಾಸ

(2) ದ್ವಿಗುಸಮಾಸ

(3) ಗಮಕಸಮಾಸ

(4) ಕರ್ಮಧಾರೆಯ ಸಮಾಸ

www.shikarat.com

**ಸೂಚನೆ :** ಕೆಳಗೆ ಕೊಟ್ಟಿರುವ ಗದ್ಯ ಭಾಗವನ್ನು ಓದಿ ಅರ್ಥ ಗ್ರಹಿಸಿ ಕೇಳಲಾದ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ **91 – 94**)

### ಉದ್ಧೃತ ಭಾಗ

ಪ್ರಾಚೀನ ಪರಂಪರೆ ಹೊಂದಿದ ಕನ್ನಡ ಎರಡು ಸಾವಿರ ವರ್ಷಗಳ ಇತಿಹಾಸ ಗಣಕೀಕರಣ, ಜಾಗತೀಕರಣ, ವಾಣಿಜ್ಯೀಕರಣಗಳ ಹಿನ್ನೆಲೆ ದೇಶಿ ಭಾಷೀಯ ಸೊರಗುವಿಕೆ, ಕನ್ನಡ ಬೆಳೆಸುವ ಜವಾಬ್ದಾರಿ ಭಾವೀ ಜನಾಂಗದ ಮೇಲೆ ಕನ್ನಡದ ಕುತ್ತುಗಳನ್ನು ಅರಿತು ಪರಿಹಾರದ ದಾರಿ ಹಿಡಿಯುವುದು ಭಾವೀಜನಾಂಗದ ಮೇಲಿರುವ ಹೊಣೆಗಾರಿಕೆ ಹೌದು. ಭಾಷೆಯನ್ನು ಬೆಳೆಸುವುದು ಇಪ್ಪತ್ತನೆಯ ಶತಮಾನದ ಒಂದು ದೊಡ್ಡ ಸಮಸ್ಯೆ. ತಂದೆ ತಾಯಿಗಳ ಹಾಗೂ ಪೋಷಕರ ಹಾಗೂ ಸಮಾಜದ ಜವಾಬ್ದಾರಿಯು ಹೆಚ್ಚು, ಇಂಗ್ಲೀಷ್, ಹಿಂದಿಯ ಪ್ರಭಾವ ಕನ್ನಡ ಭಾಷೆಯು ಬೆಳೆಯಲು ಅಡ್ಡಿ ಎಂಬ ಭಾವನೆ ಅಲ್ಲಲ್ಲಿ ಕಂಡು ಭಾಷೆ ಕುಂಠಿತವಾಗುತ್ತದೆ. ಒಂದು ಭಾಷೆ ಬೆಳೆಯಲು ಅಲ್ಲಿಯ ಸರ್ಕಾರದ ಪಾತ್ರ ಭದ್ರ, ಭಾಷೆ ಬೆಳೆದರೆ ಸಂಸ್ಕೃತಿ ಬೆಳೆಯುವುದಿಲ್ಲ, ಸಂಸ್ಕೃತಿ ಬೆಳೆದರೆ ಭಾಷೆ ಬೆಳೆಯುವುದಿಲ್ಲ ಎಂಬ ವಾದ. ಕನ್ನಡ ಭಾಷೆಗೆ ಇತರೆ ಭಾಷೆಯಂತೆ ಬೆಳೆಯುವ ಹಕ್ಕಿದೆ. ಕನ್ನಡ ಭಾಷೆಗೆ ಬೆಳೆಯುವ ಶಕ್ತಿ ಇದೆ. ಹಾಗಾಗಿಯೇ ಈ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಇದಲ್ಲದೆ ಹಿಂದೆ ಹಲವು ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಪಡೆಯುವ ಹಾದಿಯಲ್ಲಿ ಹೋರಾಟ ಹೆಚ್ಚು, ಹೀಗೆಯೇ ಹಿಂದಿ, ಇಂಗ್ಲೀಷ್, ಮರಾಠಿ ಭಾಷೆಗಳಿಗೆ ಶಾಸ್ತ್ರೀಯ ಸ್ಥಾನಮಾನ. ಹಿಂದಿನ ರಾಜಮನೆತನಗಳು ಕನ್ನಡ ಬೆಳೆಸಲು ಶ್ರಮದಾನ ಮಾಡಿವೆ. ಭಾಷೆ ಬೆಳೆಯಲು ಆ ಭಾಷೆಯ ಜನಾಂಗ ರಾಜಕೀಯವಾಗಿ ಬೆಳೆದಾಗ ರಾಜಕೀಯವಾಗಿ ಪ್ರಬಲವಾವಾಗುವ ಆಸೆ ತಾರ್ಕಿಕವಾಗಿ ಕೊನೆಯಾಗುವುದು. ಅದನ್ನು ಬೆಳೆಸಲು ಪ್ರಬಲ ಅಭ್ಯರ್ಥಿಯು ಬೇಕು. ಒಂದು ಸಾಹಿತ್ಯ ಪರಂಪರೆಯ ಅಧ್ಯಯನ ಭಾಷೆಯನ್ನು ಬೆಳೆಸಲು ಸಹಕಾರಿ. ಜರ್ಮನಿಯ ಮಹತ್ವದ ದಾರ್ಶನಿಕ ನಿಷೆಯ ಪ್ರಕಾರ ಭಾಷೆ ಬೆಳೆಯಲು ರಾಜಕೀಯ ಅಧಿಕಾರ, ಆರ್ಥಿಕತೆ, ವಿಶ್ವವ್ಯಾಪಾರ, ಸೈನ್ಯ, ಪಾರ್ಲಿಮೆಂಟು ಇವುಗಳು ಬೆಳೆಯಬೇಕು ಎಂದು ಟ್ವೈಲೆಟ್ ಆಫ್ ದಿ ಪೀಡಲ್ಸ್‌ನಲ್ಲಿ ಹೇಳಿಕೆ, ಭಾಷೆ ಬೆಳೆದರೆ ಸಂಸ್ಕೃತಿ ಶಿಥಿಲ, ಸಂಸ್ಕೃತಿ ಬೆಳೆದರೆ ಭಾಷೆ ಶಿಥಿಲ. ಇದನ್ನು ಒಪ್ಪುವುದು ಕಷ್ಟ ಪುರಾತನ ಕಾಲದಲ್ಲಿ ಬಳಕೆಯಲ್ಲಿದ್ದು ಚಿರಂತನವಾಗಿ ಕಾಲಕಾಲಕ್ಕೆ ಪರಿವರ್ತನೆಯಾಗುತ್ತಿರುವ ಹಾಗೂ ದೊಡ್ಡ ಸಮುದಾಯ ಬಳಸುತ್ತಿರುವ ಭಾಷೆ ಶಾಸ್ತ್ರೀಯ ಭಾಷೆ, ಭಾಷೆಯ ಬೆಳವಣಿಗೆ ಉತ್ತರವನ್ನು ಹುಡುಕುವುದು ಒಂದು ಪರಿಣಾಮಕಾರಿ. ಪಂಡಿತರು ಸಹ ಭಾಷೆಯ ಬೆಳವಣಿಗೆಗೆ ಉತ್ತರ ಹುಡುಕುತ್ತಾರೆ.

www.shikarat.com

91. ಸಾಮಾನ್ಯವಾಗಿ ಕನ್ನಡವನ್ನು ಬೆಳೆಸುವ ಜವಾಬ್ದಾರಿ ಯಾರ ಮೇಲಿದೆ ಎಂದು ಹೀಗೂ ಹೇಳಬಹುದು.

(1) ಅವರು ತುಂಬಾ ಯುವಕರಾದ್ದರಿಂದ ಅವರು ಜವಾಬ್ದಾರಿವಂತರು.

(2) ಯುವ ಜನಾಂಗದ ಮೇಲಿದೆ.

(3) ಯುವಕರೇ ಸ್ವತಃ ಜವಾಬ್ದಾರಿಯನ್ನು ಹೊರಬೇಕು.

(4) ಯುವಕರ ಮೇಲೆ ಕಾನೂನಿನ ಮೂಲಕ ಜವಾಬ್ದಾರಿಯನ್ನು ಹೊರಿಸಬೇಕು.

92. ದಾರ್ಶನಿಕ ಎಂದರೇನು ? ಆತ ತನ್ನ ಕೃತಿಯಲ್ಲಿ ಏನು ಬೆಳೆದರೆ ಬಾಷೆ ಬೆಳೆಯುವುದು ಹಾಗೂ ಉದ್ಧೃತ ಭಾಗದಂತೆ ಶಿಥಿಲ ಎಂದರೇನು ?

(1) ಒಂದು ಸಾಹಿತ್ಯ ಪ್ರಕಾರ ಕವಿ ಸಂಸ್ಕೃತಿ ಬೆಳೆದರೆ ಭಾಷೆ ತೀರ ಹಾಳಾಗುವುದನ್ನು.

(2) ಒಂದು ಸಾಹಿತ್ಯದ ಪ್ರಕಾರ ಚಿಂತಕ ಸಂಸ್ಕೃತಿ ಬೆಳೆದರೆ ಭಾಷೆ ಬೆಳೆಯುವುದಿಲ್ಲ ಬಾಷೆ ಪೂರ್ಣ ಪ್ರಮಾಣದಲ್ಲಿ ಹಾಳಾಗುವುದನ್ನು.

(3) ಒಂದು ಸಾಹಿತ್ಯದ ಪ್ರಕಾರ ಕವಿ ಹಾಗೂ ಚಿಂತಕ ಸಂಸ್ಕೃತಿ ಬೆಳೆದರೆ ಭಾಷೆ ಬೆಳೆಯುವುದಿಲ್ಲ ಭಾಷೆ ಸ್ವಲ್ಪ ಹಾಳಾಗುವುದನ್ನು.

(4) ಆತ ಇತಿಹಾಸಕಾರನಂತೆ ಭಾಷೆ ಬೆಳೆದರೆ ಸಂಸ್ಕೃತಿ ಹಾಳಾಗುವುದು ಭಾಷೆ ಹಾಳಾಗದೆ ಇರುವುದು.

93. ಉದ್ಧೃತ ಭಾಗದ ಮೇರೆಗೆ ಕೆಳಗಿನ ಯಾವ ಹೇಳಿಕೆಯು/ಗಳು ಸರಿಯಾಗಿದೆ ?

a. ಕವಿಗಳ ಪ್ರಕಾರ ಭಾಷೆ ಬೆಳವಣಿಗೆಗೆ ಸಾಮಾಜಿಕರು, ರಾಜಕೀಯದವರು, ಸೈನಿಕರು

b. ಚಿಂತಕನ ಅನಿಸಿಕೆಯಂತೆ ಭಾಷೆ ಬೆಳೆಯ ಬೇಕಾದರೆ ಪಾರ್ಲಿಮೆಂಟ್ ಸಹಕಾರಿಯಾಗುತ್ತದೆ

c. ಕವಿಗಳ ಪ್ರಕಾರ ಭಾಷೆ ಬೆಳವಣಿಗೆಗೆ ಸೈನ್ಯ ಆರ್ಥಿಕತೆ ಕಾರಣ

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) a ಮಾತ್ರ

(2) a ಮತ್ತು b ಮಾತ್ರ

(3) b ಮತ್ತು c ಮಾತ್ರ

(4) a, b ಮತ್ತು c

94. ಉದ್ಧೃತ ಭಾಗದ ಮೇರೆಗೆ ಈ ಯಾವ ಭಾಷೆಯು ಶಾಸ್ತ್ರೀಯ ಸ್ಥಾನಮಾನ ಹೊಂದಿದೆ ?

(1) ಕನ್ನಡ ಭಾಷೆಯು ಒಂದು

(2) ಹಿಂದಿ ಭಾಷೆಯು ಶಾಸ್ತ್ರೀಯ ಸ್ಥಾನಮಾನ ಹೊಂದಿದೆ

(3) ಮರಾಠಿ ಭಾಷೆಗೂ ಶಾಸ್ತ್ರೀಯ ಸ್ಥಾನಮಾನ ಹೊಂದುವ ಅರ್ಹತೆ ಇದೆ

(4) ಮೇಲಿನದು ಯಾವುದೂ ಅಲ್ಲ

www.shikarat.com

ಸೂಚನೆ : ಕೆಳಗಿನವುಗಳಲ್ಲಿ ಖಾಲಿ ಇರುವ ಜಾಗಕ್ಕೆ ಸರಿಯಾದ ಉತ್ತರವನ್ನು ಸೂಚಿಸಿರಿ. (ಪ್ರಶ್ನೆ ಸಂಖ್ಯೆ *95 – 100*)

**95.** 'ಅಲ್ಪಡು' ಎಂಬ ಪ್ರತ್ಯಯವನ್ನು ________ ಗೆ ಸೇರಿಸುತ್ತೇವೆ.

(1) ಕರ್ಮಪದ

(2) ಕಾಲಸೂಚಕ ಪ್ರತ್ಯಯ

(3) ಕ್ರಿಯಾಪದ ಧಾತು

(4) ಕರ್ತೃಪದ

**96.** ಹಳೆಯ ಪುಸ್ತಕ ಎಂಬ ಪ್ರಯೋಗದಲ್ಲಿ ಹಳೆಯ ಎಂಬುದು ________ .

(1) ಸಂಖ್ಯಾವಾಚಕ

(2) ಪರಿಣಾಮವಾಚಕ

(3) ಗುಣವಾಚಕ

(4) ಪ್ರಕಾರವಾಚಕ

**97.** "ಇವರಂ ಪ್ರಾಣಪ್ರಿಯರಂ ನೆವಮಿಲ್ಲದೆ ಕರ್ಮವಶಮೆ ನೆವಮೆನೆ ಕಂದ" ಈ ಪದ್ಯ ________ ಗೆ ಉದಾಹರಣೆಯಾಗಿದೆ.

(1) ಷಟ್ಪದಿ

(2) ಭಾಮಿನಿ ಲಯ

(3) ತ್ರಿಪದಿ

(4) ಕಂದ

**98.** ಈ ಕೆಳಗಿನವುಗಳಲ್ಲಿ ಓಷ್ಠ್ಯ ಧ್ವನಿಯಾಗಿರುವುದು ________ .

(1) ಕ್, ಗ್

(2) ಚ್, ಜ್

(3) ಟ್, ಡ್

(4) ಪ್, ಬ್

**99.** 'ಜನಕಂಗೆ ನಾವನ್ಯರಲ್ಲ' ಇಲ್ಲಿ ಜನಕಂಗೆ ಎಂಬುದು ________ ವಿಭಕ್ತಿ.

(1) ಪ್ರಥಮ

(2) ಚತುರ್ಥಿ

(3) ದ್ವಿತೀಯ

(4) ಸಪ್ತಮೀ

**100.** ಪಂಚಮ ವಿಭಕ್ತಿಯು ________ ಕಾರಕ.

(1) ಕರ್ಮಕಾರಕ

(2) ಕರ್ತೃಕಾರಕ

(3) ಅಪಾದನಕಾರಕ

(4) ಸಂಬಂಧಕಾರಕ



www.shikarat.com